2-72-(7)

<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪುಟ್ಟಣ್ಣ ಇವರು ನಿಯಮ 72 ರಡಿ ಮಂಡಿಸಿರುವ ಸೂಚನೆಗೆ ಹೇಳಿಕೆ</u>

<u>ವಿಷಯ:</u> ರಾಜ್ಯದಲ್ಲಿ ಡಿಟೆಕ್ಟಿವ್ ಇನ್ಸ್‌ಪೆಕ್ಟರ್‌ಗಳನ್ನು ಸಿವಿಲ್ ಹುದ್ದೆಗೆ ತಂದಾಗ ಸಿವಿಲ್ ವಿಭಾಗದ ಹಿರಿಯ ಅಧಿಕಾರಿಗಳಿಗೆ ಅನ್ಯಾಯವಾಗುತ್ತಿದೆ. 1994 ನೇ ಬ್ಯಾಚ್‌ನ ಸಿವಿಲ್ ಅಧಿಕಾರಿಗಳ ಮೇಲೆ 2002 ರ ಬ್ಯಾಚ್‌ನ ಡಿಟೆಕ್ಟಿವ್ ಅಧಿಕಾರಿಗಳನ್ನು ಎಸ್.ಪಿಯಾಗಿ ಮಾಡಿರುವುದರಿಂದ ಸಿವಿಲ್ ಅಧಿಕಾರಿಗಳ ಹಿರಿತನ ಕಡೆಗಣನೆ ಮಾಡಲಾಗಿದೆ. ಡಿಟೆಕ್ಟಿವ್ ಡಿಎಸ್‌ಪಿ/ಎಸ್‌ಪಿ ಅಡಿಯಲ್ಲಿ ಕೆಲಸ ಮಾಡಲು ಡಿಟೆಕ್ಟಿವ್ ಪಿ.ಎಸ್.ಐ/ಪಿ.ಐ ಇಲ್ಲದೆ ಇದ್ದಾಗಲು ಅವರುಗಳಿಗೆ 05 ವರ್ಷಗಳಿಗೊಮ್ಮೆ ಬಡ್ತಿ ನೀಡುತ್ತಿದ್ದು, 05 ವರ್ಷಗಳ ಅಂತರದಲ್ಲಿ ಡಿಟೆಕ್ಟಿವ್ ಇನ್ಸ್‌ಪೆಕ್ಟರ್ ಬಡ್ತಿ ನೀಡಿದ ಮೇಲೆ ಸಿವಿಲ್ ಇನ್ಸ್‌ಪೆಕ್ಟರ್‌ಗಳಿಗೆ 05 ವರ್ಷಗಳ ಅಂತರದಲ್ಲಿ ಬಡ್ತಿ ನೀಡದೆ ಅನ್ಯಾಯ ಮಾಡಲಾಗುತ್ತಿದೆ. ನಾನ್ ಐಪಿಎಸ್ ಹುದ್ದೆಗಳಿಗೆ ಐಪಿಎಸ್ ಅಧಿಕಾರಿಗಳನ್ನು ನೇಮಕ ಮಾಡಲಾಗುತ್ತಿದೆ. ಇದರಿಂದ ಕನ್ನಡಿಗರ ನಾನ್ ಐಪಿಎಸ್ ಹುದ್ದೆಯನ್ನು ಐಪಿಎಸ್ ಹುದ್ದೆಗೆ ಬದಲಾಯಿಸಿ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಕನ್ನಡಿಗರಿಗೆ ಅನ್ಯಾಯ ಮಾಡಲಾಗುತ್ತಿದೆ. ಐಪಿಎಸ್ ಹುದ್ದೆಗಳು ಖಾಲಿ ಇಲ್ಲದೆ ಇದ್ದಾಗಲೂ ಐಪಿಎಸ್ ಅಧಿಕಾರಿಗಳನ್ನು ರಾಜ್ಯದಲ್ಲಿ ನೇಮಕಾತಿ ಮಾಡಿಕೊಳ್ಳುವುದರಿಂದ ರಾಜ್ಯದಲ್ಲಿ ಬಡ್ತಿಗಾಗಿ ಕಾಯುತ್ತಿರುವ ಅಧಿಕಾರಿಗಳಿಗೆ ಅನ್ಯಾಯವಾಗುತ್ತಿದೆ. ಆದ್ದರಿಂದ ಈಗಾಗಲೇ ಮಂಜೂರಾದ ಹುದ್ದೆಗಳಿಗೆ ಅನುಗುಣವಾಗಿ ಖಾಲಿ ಇರುವ 25 ನಾನ್ ಐಪಿಎಸ್ ಎಸ್‌ಪಿ ಹುದ್ದೆಗಳಿಗೆ ಕೂಡಲೇ ಬಡ್ತಿ ನೀಡಬೇಕು. ರಾಜ್ಯದಲ್ಲಿ ಬಡ್ತಿಗಾಗಿ ಮೀಸಲಾದ ನಾನ್ ಐಪಿಎಸ್ ಹುದ್ದೆಗಳನ್ನು ಬಡ್ತಿಯವರಿಗೆ ಮೀಸಲಿಡಬೇಕೆಂಬ ವಿಷಯವನ್ನು ನಿಯಮ 72 ರಲ್ಲಿ ಮಾನ್ಯ ಗೃಹ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

<u>ಸರ್ಕಾರದ ಹೇಳಿಕೆ</u>

ಸಿವಿಲ್ ಅಧಿಕಾರಿಗಳಿಗೆ ಸಂಬಂಧಪಟ್ಟಂತೆ ಮಂಜೂರಾತಿ ಬಲ ಮತ್ತು ವೃಂದ ಮತ್ತು ನೇಮಕಾತಿ ನಿಯಮ ಹಾಗೂ ಸಿಐಡಿ ಘಟಕಕ್ಕೆ ಸಂಬಂಧಿಸಿದಂತೆ ಮಂಜೂರಾತಿ ಬಲ ಮತ್ತು ವೃಂದ ಮತ್ತು ನೇಮಕಾತಿ ನಿಯಮಗಳು ಬೇರೆ ಬೇರೆ ಇರುತ್ತವೆ.

ಸಿಐಡಿ ಘಟಕದ ಮಂಜೂರಾತಿ ಬಲ ಮತ್ತು ವೃಂದ ಮತ್ತು ನೇಮಕಾತಿ ನಿಯಮ 1994 ರನ್ವಯ ಜ್ಯೇಷ್ಠತೆ, ಅರ್ಹತೆ ಮತ್ತು ರಿಕ್ತಸ್ಥಾನಗಳನ್ನಾಧರಿಸಿ 2002 ರ ಬ್ಯಾಚಿನ ಡಿಟೆಕ್ಟಿವ್ ಡಿವೈಎಸ್‌ಪಿ ರವರುಗಳಿಗೆ ಎಸ್‌ಪಿ ಹುದ್ದೆಗೆ ಮುಂಬಡ್ತಿ ನೀಡಿ ಆದೇಶಿಸಲಾಗಿರುತ್ತದೆ.

ಡಿಟೆಕ್ಟೀವ್ ವೃಂದದಲ್ಲಿ ನೇರ ನೇಮಕಾತಿ ಅಡಿ 2002 ನೇ ಬ್ಯಾಚಿನ್ ಪಿಎಸ್‌ಐಗಳು ಮೊದಲನೇ ಬ್ಯಾಚ್ ಆಗಿ ನೇಮಕಾತಿ ಹೊಂದಿದ್ದು ಜ್ಯೇಷ್ಠತೆ, ಅರ್ಹತೆ ಮತ್ತು ರಿಕ್ತಸ್ಥಾನಗಳನ್ನಾಧರಿಸಿ ಮುಂಬಡ್ತಿ ಹೊಂದಿರುತ್ತಾರೆ.

ಸಿವಿಲ್ ವೃಂದದಲ್ಲಿ ಕೆಳಹಂತದಲ್ಲಿ ಅಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು, ರಿಕ್ತಸ್ಥಾನಗಳು ಕಡಿಮೆ ಇರುತ್ತದೆ. ಆದುದರಿಂದ, ಸಿವಿಲ್ ವೃಂದದ ಅಧಿಕಾರಿಗಳಿಗೆ ಮುಂಬಡ್ತಿ ಅವಕಾಶಗಳು ಡಿಟೆಕ್ಟೀವ್ ಅಧಿಕಾರಿಗಳಿಗಿಂತ ಕಡಿಮೆ ಇರುತ್ತದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 67 ಎಸ್‌ಆರ್‌ಡಿ 94, ದಿನಾಂಕ: 1994 ರಲ್ಲಿ ಪ್ರಕಟಿಸಲಾದ ಸಿಐಡಿ ಘಟಕದ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಎಸ್‌ಪಿ (ಡಿಟೆಕ್ಟಿವ್) ವೃಂದದ 08 ಹುದ್ದೆಗಳ ಮಂಜೂರಾತಿ ಬಲವಿತ್ತು. ಕೇಂದ್ರ ಗೃಹ ಮಂತ್ರಾಲಯ, ನವದೆಹಲಿ ರವರ

ಅಧಿಸೂಚನೆ ಸಂಖ್ಯೆ: 11052/08/2015-AIS-II(A), dtd: 29.12.2015 ರಲ್ಲಿ ಈ ಮೇಲ್ಕಂಡ 08 ಎಸ್‌ಪಿ (ಡಿಟೆಕ್ಟಿವ್) ಹುದ್ದೆಗಳ ಪೈಕಿ 03 ಹುದ್ದೆಗಳನ್ನು ಐಪಿಎಸ್ ಕೇಡರ್ ಹುದ್ದೆಗಳನ್ನಾಗಿ ಪರಿಗಣಿಸಿ ಆದೇಶ ಹೊರಡಿಸಲಾಗಿರುತ್ತದೆ. ಅದರಂತೆ, 05 ಹುದ್ದೆಗಳು ಲಭ್ಯವಿರುತ್ತದೆ.

ಈ ಹಿನ್ನೆಲೆಯಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 185 ಮೊಸಿಅ 2018, ದಿನಾಂಕ: 07.09.2020 ರಲ್ಲಿ ಈ ಹಿಂದೆ ಸರ್ಕಾರದ ಅಧಿಸೂಚನೆ ಸಂಖ್ಯೆ : ಡಿಪಿಎಆರ್ 67 ಎಸ್‌ಆರ್‌ಡಿ 94, ದಿನಾಂಕ: 1994 ರಲ್ಲಿ ಪ್ರಕಟಿಸಲಾದ ಸಿಐಡಿ ಘಟಕದ ವೃಂದ ಮತ್ತು ನೇಮಕಾತಿಯ ಡಿವೈಎಸ್‌ಪಿ (ಡಿಟೆಕ್ಟಿವ್) ವೃಂದದಿಂದ ಎಸ್‌ಪಿ (ಡಿಟೆಕ್ಟಿವ್) ವೃಂದದ ಮುಂಬಡ್ತಿಗೆ ಸಂಬಂಧಪಟ್ಟಂತೆ ನೇಮಕಾತಿ ವಿಧಾನವನ್ನು ಈ ಕೆಳಕಂಡಂತೆ ಮಾರ್ಪಡಿಸಿ ರಚಿಸಲಾಗಿರುತ್ತದೆ.

- 03 ಹುದ್ದೆಗಳು ಐಪಿಎಸ್ ಕೇಡರ್ ಹುದ್ದೆ
- 03 ಹುದ್ದೆಗಳು ಎಸ್‌ಪಿ (ಸಿವಿಲ್) (ನಾನ್ ಐಪಿಎಸ್) ರವರನ್ನು ನಿಯೋಜಿಸುವ ಮೂಲಕ
- 03 ಹುದ್ದೆಗಳು ಡಿವೈಎಸ್‌ಪಿ ಡಿಟೆಕ್ಟೀವ್ ಹುದ್ದೆಯಿಂದ ಎಸ್‌ಪಿ (ಡಿಟೆಕ್ಟೀವ್) ಮುಂಬಡ್ತಿ ಮೂಲಕ

ಈ ಮೇಲ್ಕಂಡಂತೆ ಹುದ್ದೆಗಳ ವರ್ಗೀಕರಣದ ನಿಮಿತ್ತ (ಡಿಟೆಕ್ಟಿವ್) ವೃಂದದ ಡಿವೈಎಸ್‌ಪಿ ರವರುಗಳಿಗೆ ಎಸ್‌ಪಿ ಹುದ್ದೆಯ ಮುಂಬಡ್ತಿಗೆ ಅವಕಾಶ ಕಲ್ಪಿಸಲು 05 ಹುದ್ದೆಗಳನ್ನು ಕರ್ನಾಟಕ ಲೋಕಾಯುಕ್ತ, ಭ್ರಷ್ಟಾಚಾರ ನಿಗ್ರಹ ದಳ, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಆಂತರಿಕ ಭದ್ರತಾ ವಿಭಾಗ ಮತ್ತು ಎಸ್‌ಐಟಿ ಇಲ್ಲಿ ನಿಯೋಜಿಸಲು ಅವಕಾಶ ನೀಡಲಾಗಿರುತ್ತದೆ.

ಎಸ್‌ಪಿ (ಡಿಟೆಕ್ಟೀವ್) ವೃಂದಕ್ಕೆ ಮಂಜೂರಾದ 05 ಹುದ್ದೆಗಳನ್ನು ಎಸ್‌ಪಿ (ಐಪಿಎಸ್) ಮತ್ತು ನಾನ್ (ಐಪಿಎಸ್) ರವರುಗಳಿಗಾಗಿ ಕಡಿಮೆ ಮಾಡಿರುವುದರಿಂದ ಈ 05 ಹುದ್ದೆಗಳನ್ನು ಇಲಾಖೆಯ ಇತರೆ ಘಟಕದಲ್ಲಿ ಸರಿದೂಗಿಸಲಾಗಿದೆ.

ಈ ಮೇಲ್ಕಂಡ ಮೀಸಲಿರಿಸಿರುವ 05 ಹುದ್ದೆಗಳು ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಪಟ್ಟದಾಗಿರುವುದಿಲ್ಲ. ಇವುಗಳು ಪ್ರಕರಣಗಳ ತನಿಖೆಗೆ ಮಾತ್ರ ಸೀಮಿತವಾದ ಹುದ್ದೆಗಳಾಗಿರುತ್ತವೆ.

ಇದಕ್ಕೆ ಪ್ರತಿಯಾಗಿ, ಸಿಐಡಿ ಘಟಕದಲ್ಲಿ ಖಾಲಿ ಇರುವ ಡಿಟೆಕ್ಟೀವ್ ಇನ್ಸ್‌ಪೆಕ್ಟರ್ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದ ಕಾರಣ ಸಿವಿಲ್ ಸಬ್ ಇನ್ಸ್‌ಪೆಕ್ಟರ್ ಅಧಿಕಾರಿಗಳಿಗೆ ಇನ್ಸ್‌ಪೆಕ್ಟರ್ ಹುದ್ದೆಯ ಮುಂಬಡ್ತಿಗೆ ಅವಕಾಶ ಕಲ್ಪಿಸಲು ಡಿಟೆಕ್ಟೀವ್ ಇನ್ಸ್‌ಪೆಕ್ಟರ್ ಹುದ್ದೆಗಳ ಎದುರಾಗಿ ಪಿ.ಐ(ಸಿವಿಲ್) ವೃಂದದ ಅಧಿಕಾರಿಗಳನ್ನು ತಾತ್ಕಾಲಿಕವಾಗಿ ಸ್ವತಂತ್ರ ಪ್ರಭಾರದಲ್ಲಿರಿಸಿ ಕಾರ್ಯನಿರ್ವಹಿಸಲು ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 67 ಪಿಓಪಿ 2021, ದಿನಾಂಕ: 17.05.2021 ರಲ್ಲಿ ಅನುಮತಿ ನೀಡಲಾಗಿದ್ದು, ಅದರಂತೆ ಸಿವಿಲ್ ವೃಂದದ ಪಿಎಸ್‌ಐ ಅಧಿಕಾರಿಗಳಿಗೆ ಪಿಐ ಆಗಿ ಸ್ವತಂತ್ರ ಪ್ರಭಾರದಲ್ಲಿ ಇರಿಸಲಾಗಿರುತ್ತದೆ.

ಅಲ್ಲದೇ, ಅದೇ ರೀತಿ ಸಿಐಡಿ ಘಟಕದಲ್ಲಿ ಖಾಲಿ ಇರುವ ಡಿಟೆಕ್ಟೀವ್ ಡಿವೈಎಸ್‌ಪಿ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದ ಕಾರಣ ಸಿವಿಲ್ ಇನ್ಸ್‌ಪೆಕ್ಟರ್ ಅಧಿಕಾರಿಗಳಿಗೆ ಡಿವೈಎಸ್‌ಪಿ ಹುದ್ದೆಯ ಮುಂಬಡ್ತಿಗೆ ಅವಕಾಶ ಕಲ್ಪಿಸಲು ಡಿಟೆಕ್ಟೀವ್ ಡಿವೈಎಸ್‌ಪಿ ಹುದ್ದೆಗಳ ಎದುರಾಗಿ ಡಿವೈಎಸ್‌ಪಿ (ಸಿವಿಲ್) ವೃಂದದ ಅಧಿಕಾರಿಗಳನ್ನು ತಾತ್ಕಾಲಿಕವಾಗಿ ಸ್ವತಂತ್ರ ಪ್ರಭಾರದಲ್ಲಿರಿಸಿ ಕಾರ್ಯನಿರ್ವಹಿಸಲು ಸರ್ಕಾರದ

ಆದೇಶ ಸಂಖ್ಯೆ: ಒಇ 186 ಪಿಇಜಿ 2021, ದಿನಾಂಕ: 12.08.2021 ರಲ್ಲಿ ಅನುಮತಿ ನೀಡಲಾಗಿದ್ದು, ಅದರಂತೆ ಸಿವಿಲ್ ವೃಂದದ ಪಿಐ ಅಧಿಕಾರಿಗಳಿಗೆ ಡಿವೈಎಸ್‌ಪಿ ಆಗಿ ಸ್ವತಂತ್ರ ಪ್ರಭಾರದಲ್ಲಿ ಇರಿಸಲಾಗಿರುತ್ತದೆ.

ಅಂತೆಯೇ, 40 ಪಿಐ (ಡಿಟೆಕ್ಟೀವ್) ಮತ್ತು 08 ಡಿವೈಎಸ್‌ಪಿ (ಡಿಟೆಕ್ಟೀವ್) ಹುದ್ದೆಗಳು ಪಿಐ (ಸಿವಿಲ್) ಮತ್ತು ಡಿವೈಎಸ್‌ಪಿ (ಸಿವಿಲ್)ಅಧಿಕಾರಿಗಳಿಂದ ಭರ್ತಿ ಮಾಡಲಾಗಿರುತ್ತದೆ.

ನಾನ್ ಐಪಿಎಸ್ ಹುದ್ದೆಗಳಿಗೆ ಐಪಿಎಸ್ ಅಧಿಕಾರಿಗಳನ್ನು ಹಾಗೂ ಐಪಿಎಸ್ ಹುದ್ದೆಗಳಿಗೆ ನಾನ್ ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆಗೊಳಿಸಿ ನೇಮಕ ಮಾಡಲಾಗುತ್ತಿದೆ. ರಾಜ್ಯದಲ್ಲಿ ಎಸ್‌ಪಿ ವೃಂದದಲ್ಲಿ 57 ಕೇಡರ್ ಹುದ್ದೆಗಳ ಮಂಜೂರಾತಿ ಬಲವಿರುತ್ತದೆ ಆದರೆ ಪ್ರಸ್ತುತ, 83 ಎಸ್‌ಪಿ ಐಪಿಎಸ್ ಅಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಸದ್ಯದಲ್ಲೇ 26 ರಾಜ್ಯ ಪೊಲೀಸ್ ಸೇವಾ ವೃಂದದ ಅಧಿಕಾರಿಗಳಿಗೆ ಭಾರತೀಯ ಸೇವಾ ವೃಂದಕ್ಕೆ ಬಡ್ತಿ ನೀಡಲಿದ್ದು, ಒಟ್ಟಾರೆ ಎಸ್‌ಪಿ ಐಪಿಎಸ್ ವೃಂದದಲ್ಲಿ ಸಂಖ್ಯಾ ಬಲವು 109 ಆಗಲಿರುತ್ತದೆ. ಆದುದರಿಂದ, ಅನಿವಾರ್ಯವಾಗಿ ಐಪಿಎಸ್ ಅಧಿಕಾರಿಗಳನ್ನು ಎಕ್ಸ್ –ಕೇಡರ್ ಹುದ್ದೆಗಳಿಗೆ ನಿಯೋಜಿಸಬೇಕಾಗುತ್ತದೆ.

ಪ್ರಸ್ತುತ, ಎಸ್‌ಪಿ (ನಾನ್ ಐಪಿಎಸ್) ವೃಂದದಲ್ಲಿ 03 ಹುದ್ದೆಗಳು ಮಾತ್ರ ಖಾಲಿಯಿರುತ್ತದೆ. 02 ನಾನ್ ಐಪಿಎಸ್ ವೃಂದದ ಅಧಿಕಾರಿಗಳ ಸ್ಥಳ ನಿರೀಕ್ಷಣೆಯಲ್ಲಿರುತ್ತಾರೆ. ನೇರ ನೇಮಕಾತಿ ಅಡಿಯಲ್ಲಿ ಮಂಜೂರಾದ ಐಪಿಎಸ್ ಹುದ್ದೆಗಳನ್ನು ಕೇಂದ್ರ ಗೃಹ ಮಂತ್ರಾಲಯದಿಂದ ಕರ್ನಾಟಕ ರಾಜ್ಯಕ್ಕೆ ಹಂಚಿಕೆ ಮಾಡಲಾದ ಹುದ್ದೆಗಳ ಆಧಾರದ ಮೇಲೆ ಭರ್ತಿ ಮಾಡಲಾಗುತ್ತಿದೆ. ನಾನ್ ಐಪಿಎಸ್ ಹುದ್ದೆಗಳಿಗೆ ಐಪಿಎಸ್ ಅಧಿಕಾರಿಗಳನ್ನು ಹಾಗೂ ಐಪಿಎಸ್ ಹುದ್ದೆಗಳಿಗೆ ನಾನ್ ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆಗೊಳಿಸಿ ನೇಮಕ ಮಾಡಲಾಗುತ್ತಿರುತ್ತದೆ.

ಡಿವೈಎಸ್‌ಪಿ ಹುದ್ದೆಯಿಂದ ಎಸ್‌ಪಿ (ನಾನ್ ಐಪಿಎಸ್) ಹುದ್ದೆಗೆ ಮುಂಬಡ್ತಿಯನ್ನು ಜ್ಯೇಷ್ಠತೆ ಮತ್ತು ಅರ್ಹತೆ ಹಾಗೂ ರಿಕ್ತಸ್ಥಾನಗಳನ್ನಾಧರಿಸಿ ಆಗ್ಗಿಂದಾಗ್ಗೆ ಮುಂಬಡ್ತಿ ನೀಡಲಾಗುತ್ತಿರುತ್ತದೆ. ಈ ಹಿಂದೆ ಡಿವೈಎಸ್‌ಪಿ (ಸಿವಿಲ್) ಹುದ್ದೆಯಿಂದ ಎಸ್‌ಪಿ (ನಾನ್ ಐಪಿಎಸ್) ಹುದ್ದೆಗೆ ಮುಂಬಡ್ತಿಗೆ ಪರಿಗಣಿಸಲು ಡಿವೈಎಸ್‌ಪಿ ವೃಂದದಲ್ಲಿ ಅರ್ಹ ಸೇವಾ ಅವಧಿಯು 05 ವರ್ಷವಾಗಿತ್ತು. ಪ್ರಸ್ತುತ ಸದರಿ ಅರ್ಹ ಸೇವಾ ಅವಧಿಯನ್ನು 05 ವರ್ಷದಿಂದ 04 ವರ್ಷಕ್ಕೆ ಇಳಿಸಲಾಗಿರುತ್ತದೆ.

ಇದರಿಂದಾಗಿ ಸಿವಿಲ್ ಅಧಿಕಾರಿಗಳ ಸೇವಾ ಹಿರಿತನವನ್ನು ಕಡೆಗಣಿಸುವ ಮತ್ತು ಅವರುಗಳಿಗೆ ಅನ್ಯಾಯವಾಗಿರುವ ಪ್ರಶ್ನೆ ಉದ್ಭವಿಸುವುದಿಲ್ಲ.

(ಅರಗ ಜ್ಞಾನೇಂದ್ರ)
ಗೃಹ ಸಚಿವರು

ಸಂಖ್ಯೆ: ಒಇ 285 ಪಿಇಜಿ 2021

ಎ-72-67

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ 72 ರಡಿ ಮಂಡಿಸಿರುವ ಸೂಚನೆಗೆ ಹೇಳಿಕೆ**

**ವಿಷಯ:** 2002 ರ ಬ್ಯಾಚ್‌ನ ಡಿ.ಎಸ್.ಐ (ಡಿಟೆಕ್ಟೀವ್ ಸಬ್ ಇನ್ಸ್‌ಪೆಕ್ಟರ್) ರವರಿಗೆ 2020 ರಲ್ಲಿ ಸಿ ಅಂಡ್ ಆರ್ ರೂಲ್ಸ್ ಬದಲಾವಣೆ ಮಾಡಿ, ಬೇರೆ ಬೇರೆ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸಲು ಅವಕಾಶ ಮಾಡಿಕೊಟ್ಟಿರುವ ಅವೈಜ್ಞಾನಿಕ ಕ್ರಮದಿಂದಾಗಿ, ಸೇವಾ ಹಿರಿತನದ ಅಧಿಕಾರಿಗಳು, ತಮಗಿಂತ ವಯಸ್ಸಿನಲ್ಲಿ ಮತ್ತು ಸೇವೆಯಲ್ಲಿ ಕಿರಿಯರಾದ ಅಧಿಕಾರಿಗಳ ಕೈಕೆಳಗೆ ಕೆಲಸ ನಿರ್ವಹಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದ್ದು, ಇದರಿಂದಾಗಿ ತಾರತಮ್ಯವಾಗಿದ್ದು, ಸಾಮಾಜಿಕ ನ್ಯಾಯ ಪಾಲನೆಯಾಗದೆ ಇರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಗೃಹ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಸರ್ಕಾರದ ಹೇಳಿಕೆ**

ಸಿವಿಲ್ ಅಧಿಕಾರಿಗಳಿಗೆ ಸಂಬಂಧಪಟ್ಟಂತೆ ಮಂಜೂರಾತಿ ಬಲ ಮತ್ತು ವೃಂದ ಮತ್ತು ನೇಮಕಾತಿ ನಿಯಮ ಹಾಗೂ ಸಿಐಡಿ ಘಟಕಕ್ಕೆ ಸಂಬಂಧಿಸಿದಂತೆ ಮಂಜೂರಾತಿ ಬಲ ಮತ್ತು ವೃಂದ ಮತ್ತು ನೇಮಕಾತಿ ನಿಯಮಗಳು ಬೇರೆ ಇರುತ್ತವೆ.

ಸರ್ಕಾರದ ಅಧಿಸೂಚನೆ ಸಂಖ್ಯೆ : ಡಿಪಿಎಆರ್ 67 ಎಸ್‌ಆರ್‌ಡಿ 94, ದಿನಾಂಕ: 1994 ರಲ್ಲಿ ಪ್ರಕಟಿಸಲಾದ ಸಿಐಡಿ ಘಟಕದ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಎಸ್‌ಪಿ (ಡಿಟೆಕ್ಟಿವ್) ವೃಂದದ 08 ಹುದ್ದೆಗಳ ಮಂಜೂರಾತಿ ಬಲವಿತ್ತು. ಕೇಂದ್ರ ಗೃಹ ಮಂತ್ರಾಲಯ, ನವದೆಹಲಿ ರವರ ಅಧಿಸೂಚನೆ ಸಂಖ್ಯೆ: 11052/08/2015-AIS-II(A), dtd: 29.12.2015 ರಲ್ಲಿ ಈ ಮೇಲ್ಕಂಡ 08 ಎಸ್‌ಪಿ (ಡಿಟೆಕ್ಟಿವ್) ಹುದ್ದೆಗಳ ಪೈಕಿ 03 ಹುದ್ದೆಗಳನ್ನು ಐಪಿಎಸ್ ಕೇಡರ್ ಹುದ್ದೆಗಳನ್ನಾಗಿ ಪರಿಗಣಿಸಿ ಆದೇಶ ಹೊರಡಿಸಲಾಗಿರುತ್ತದೆ. ಅದರಂತೆ, 05 ಹುದ್ದೆಗಳು ಲಭ್ಯವಿರುತ್ತದೆ.

ಈ ಹಿನ್ನೆಲೆಯಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 185 ಪೊಸಿಲ 2018, ದಿನಾಂಕ: 07.09.2020 ರಲ್ಲಿ ಈ ಹಿಂದೆ ಸರ್ಕಾರದ ಅಧಿಸೂಚನೆ ಸಂಖ್ಯೆ : ಡಿಪಿಎಆರ್ 67 ಎಸ್‌ಆರ್‌ಡಿ 94, ದಿನಾಂಕ: 1994 ರಲ್ಲಿ ಪ್ರಕಟಿಸಲಾದ ಸಿಐಡಿ ಘಟಕದ ವೃಂದ ಮತ್ತು ನೇಮಕಾತಿಯ ಡಿವೈಎಸ್‌ಪಿ (ಡಿಟೆಕ್ಟಿವ್) ವೃಂದದಿಂದ ಎಸ್‌ಪಿ (ಡಿಟೆಕ್ಟಿವ್) ವೃಂದದ ಮುಂಬಡ್ತಿಗೆ ಸಂಬಂಧಪಟ್ಟಂತೆ ನೇಮಕಾತಿ ವಿಧಾನವನ್ನು ಈ ಕೆಳಕಂಡಂತೆ ಮಾರ್ಪಡಿಸಿ ರಚಿಸಲಾಗಿರುತ್ತದೆ.

- 03 ಹುದ್ದೆಗಳು ಐಪಿಎಸ್ ಕೇಡರ್ ಹುದ್ದೆ
- 03 ಹುದ್ದೆಗಳು ಎಸ್‌ಪಿ (ಸಿವಿಲ್) (ನಾನ್ ಐಪಿಎಸ್) ರವರನ್ನು ನಿಯೋಜಿಸುವ ಮೂಲಕ
- 03 ಹುದ್ದೆಗಳು ಡಿವೈಎಸ್‌ಪಿ ಡಿಟೆಕ್ಟೀವ್ ಹುದ್ದೆಯಿಂದ ಎಸ್‌ಪಿ (ಡಿಟೆಕ್ಟೀವ್) ಮುಂಬಡ್ತಿ ಮೂಲಕ

ಈ ಮೇಲ್ಕಂಡಂತೆ ಹುದ್ದೆಗಳ ವರ್ಗೀಕರಣದ ನಿಮಿತ್ತ ಡಿಟೆಕ್ಟೀವ್ ವೃಂದದ ಡಿವೈಎಸ್‌ಪಿ ರವರುಗಳಿಗೆ ಎಸ್‌ಪಿ ಹುದ್ದೆಯ ಮುಂಬಡ್ತಿಗೆ ಅವಕಾಶ ಕಲ್ಪಿಸಲು 05 ಹುದ್ದೆಗಳನ್ನು ಕರ್ನಾಟಕ ಲೋಕಾಯುಕ್ತ, ಭ್ರಷ್ಟಾಚಾರ ನಿಗ್ರಹ ದಳ, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಆಂತರಿಕ ಭದ್ರತಾ ವಿಭಾಗ ಮತ್ತು ಎಸ್‌ಐಟಿ ಇಲ್ಲಿ ನಿಯೋಜಿಸಲು ಅವಕಾಶ ನೀಡಲಾಗಿರುತ್ತದೆ.

ಎಸ್‌ಪಿ (ಡಿಟೆಕ್ಟೀವ್) ವೃಂದಕ್ಕೆ ಮಂಜೂರಾದ 05 ಹುದ್ದೆಗಳನ್ನು ಎಸ್‌ಪಿ (ಐಪಿಎಸ್) ಮತ್ತು ನಾನ್ (ಐಪಿಎಸ್) ರವರುಗಳಿಗಾಗಿ ಕಡಿಮೆ ಮಾಡಿರುವುದರಿಂದ ಈ 05 ಹುದ್ದೆಗಳನ್ನು ಇಲಾಖೆಯ ಇತರೆ ಘಟಕದಲ್ಲಿ ಸರಿದೂಗಿಸಲಾಗಿದೆ.

ಈ ಮೇಲ್ಕಂಡ ಮೀಸಲಿರಿಸಿರುವ 05 ಹುದ್ದೆಗಳು ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಪಟ್ಟದಾಗಿರುವುದಿಲ್ಲ. ಇವುಗಳು ಪ್ರಕರಣಗಳ ತನಿಖೆಗೆ ಮಾತ್ರ ಸೀಮಿತವಾದ ಹುದ್ದೆಗಳಾಗಿರುತ್ತವೆ.

ಡಿಟೆಕ್ಟೀವ್ ವೃಂದದಲ್ಲಿ 1ನೇ ಬ್ಯಾಚ್ ಪಿಎಸ್ಐ ಆಗಿ 2002 ರಲ್ಲಿ ನೇಮಕಾತಿಗೊಂಡಿದ್ದು, ಸಿಐಡಿ ಘಟಕದ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಡಿಟೆಕ್ಟೀವ್ ಪಿಎಸ್ಐ ರವರು ರಿಕ್ತ ಸ್ಥಾನ ಲಭ್ಯವಾದಂತೆ ಮೇಲಿನ ಹುದ್ದೆಗೆ ಅರ್ಹತೆ ಮೇಲೆ ಪದೋನ್ನತಿ ಹೊಂದಿರುತ್ತಾರೆ.

ವೃಂದ ಮತ್ತು ನೇಮಕಾತಿ ನಿಯಮಕ್ಕೆ ತಿದ್ದುಪಡಿಯಂತೆ 05 ಘಟಕದಲ್ಲಿ 05 ಎಸ್‌ಪಿ ಹುದ್ದೆಗಳಿಗೆ ಮಾತ್ರ ಇವರುಗಳನ್ನು ನಿಯೋಜಿಸಲು ಅವಕಾಶ ಇರುತ್ತದೆ. ಉಳಿದಂತೆ ಬೇರೆ ಯಾವುದೇ ಘಟಕಕ್ಕೆ ಇವರ ನಿಯೋಜನೆ ಇರುವುದಿಲ್ಲ.

ಈ ಹಿಂದೆ ಜಾರಿಯಲ್ಲಿದ್ದ ಸಿಐಡಿ ಘಟಕದ ವೃಂದ ಮತ್ತು ನೇಮಕಾತಿ 1994 ರಲ್ಲಿ ಎಸ್‌ಪಿ (ಡಿಟೆಕ್ಟೀವ್) ವೃಂದಕ್ಕೆ ಮಂಜೂರಾದ 08 ಹುದ್ದೆಗಳನ್ನು ಮೀರಿ ಇನ್ನಾವುದೇ ಡಿಟೆಕ್ಟೀವ್ ಎಸ್‌ಪಿ ಹುದ್ದೆಗಳನ್ನು ಹೆಚ್ಚಿಸಿರುವುದಿಲ್ಲ ಎಂದು ಸ್ಪಷ್ಟಪಡಿಸಿದೆ. ಹುದ್ದೆಗಳು ಕೇವಲ ಮರುಹಂಚಿಕೆಯಾಗಿರುತ್ತದೆ. ಹೀಗಾಗಿ ನಾನ್ ಐಪಿಎಸ್ ವೃಂದಕ್ಕೆ ಲಭ್ಯವಿರುವ ಹುದ್ದೆಗಳಲ್ಲಿ ಒಟ್ಟಾರೆಯಾಗಿ ಯಾವುದೇ ಹುದ್ದೆಗಳನ್ನು ಕಡಿತಗೊಳಿಸಿರುವುದಿಲ್ಲ.

(ಅರಗ ಜ್ಞಾನೇಂದ್ರ)
ಗೃಹ ಸಚಿವರು

ಸಂಖ್ಯೆ: ಒಇ 287 ಪಿಇಜಿ 2021